ನಕ್ಕಳು.

'ಅದೇ ಈ ಥರಾ ಯಾವತ್ತಾದ್ರೂ ಮಾತಿಗೆ ಕೂತಾಗ ಹೇಳಣ ಅಂದ್ಕಂಡಿದ್ದೆ. ಸೈಕಲ್ ಹೊಡೆಯೋ ಮಜಾನೇ ಬೇರೆ ಕಣಪ್ಪ. ಅದ್ಸರಿ. ನಿಮ್ಮ ರಮೇಶ ಸರ್ ನನ್ನ ಬಗ್ಗೆ ಮತ್ತೇನು ಹೇಳಿದರಪ್ಪ' ವಿನುತಾಳಿಗೆ ರಂಗಶಂಕರದಲ್ಲಿ ನಿಂತ ರಮೇಶನ ಕಣ್ಣುಗಳಲ್ಲಿ ತನ್ನ ಚಿತ್ರಣ ಹೇಗೆ ಮೂಡಿರಬಹುದು ಎಂಬ ಕುತೂಹಲ.

'ಏನಿಲ್ಲಪ್ಪ. ಅವರು ಇಲ್ಲಿ ಬಂದಾಗ ವಿನೀ ಏನು ಮಾಡ್ತಾಳೆ ಮನೆಯಲ್ಲಿ ಒಬ್ಬಳೇ ಅಂತ ಕೇಳಿದಾಗ ಅವರು ಸೈಕಲ್ ವಿಚಾರ ಹೇಳಿದ್ರು. ಆದರೆ ನಾ ರಮೇಶಸರ್‌ಗೆ ಎಷ್ಟು ಗ್ರೇಟ್‌ಫುಲ್ ಅಂದ್ರೆ. ಅವರು ಹೇಳಿದ ಒಂದು ಮಾತು ನಂಗೆ ಎನ್‌ಎಸ್‌ಡಿ ಹೋಗೋ ಬಗ್ಗೆ ಗಂಭೀರವಾಗಿ ಯೋಚಿಸೋ ಹಂಗೆ ಮಾಡ್ತು'

'ಅರೆ. ಅಂಥದ್ದೇನು ಉಪದೇಶ ಕೊಟ್ಟನಪ್ಪ ಅವನು ನಿಂಗೆ! ನೀನು ಸಿಕ್ಕಿದ್ದೆ ಅಂತ ಹೇಳಿದ್ದ, ಆದ್ರೆ ಇಷ್ಟೆಲ್ಲ ಮಾತಾಡಿದ್ರಿ ಅಂತ ಹೇಳಿರಲಿಲ್ಲ'



'ಮೋಹನನ ಪ್ರಕರಣ ಆದಮೇಲೆ ನಾನು ಸ್ವಲ್ಪ ಕುಸಿದು ಹೋಗಿದ್ದು ನಿಜ. ಯಾವ ಹೊಸ ನಾಟಕನೂ ಇರಲಿಲ್ಲ. ಇನ್ನೊಂದು ಬೀದಿಗೆ ಹೋಗಬೇಕು ಅಂದ್ರೆ ಮೂಲೇಲಿ ಕತ್ತಲೆ ಇದೆ. ಆ ಕತ್ತಲ ಮೂಲೆ ದಾಟದಿದ್ದರೆ ಮುಂದೆ ಹೋಗಕ್ಕೆ ಆಗಲ್ಲ, ಆದ್ರೆ ಮೂಲೆ ದಾಟಕ್ಕೆ ಆಗ್ತಿಲ್ಲ ಅನ್ನೋ ಥರಾ. ಎನ್‌ಎಸ್‌ಡಿಗೆ ಸೇರಲಾ. ಮೂವತ್ತರ ಸಮೀಪ ಇದ್ದೀನಲ್ಲ, ಈಗ ಹೋಗಿ ಏನು ಸಾಧನೆ ಮಾಡ್ತೀನಿ ಅಂತ ಹಿಂಗೆಲ್ಲ. ಒಂದ್ಸಲ ಮಾತಾಡ್ತಾ ಇದ್ದಾಗ ನನ್ನ ತೊಳಲಾಟ ಗಮನಿಸಿದ ರಮೇಶ ಸರ್, 'ಮೂವತ್ತರ ಸಮೀಪ, ಅಷ್ಟೇ ತಾನೆ. ನನ್ನ ಹಂಗೆ ಐವತ್ತು ದಾಟಿಲ್ಲವಲ್ಲ.ಈಗ ಈ ಮೂಲೆ ಹಾರಿ, ಮುಂದೆ ಹೋಗಲಿಲ್ಲ ಅಂದ್ರೆ ಯಾವತ್ತೂ ಹೋಗಕ್ಕೇ ಆಗಲ್ಲ ನಿಮಗೆ. ಇದು ಬಹುಶಃ ಬದುಕು ನಿಮಗೆ ಕೊಡ್ತಿರೋ ಕಡೇ ಅವಕಾಶನೂ ಇರಬಹುದು, ಯಾರಿಗೆ ಗೊತ್ತು' ಅಂದ್ರು. ಅದು ನನ್ನ ಮನಸ್ಸಿನಲ್ಲಿ ನಿಲ್ತು. ಅವತ್ತು ಮೋಹನನ ಪ್ರಶ್ನೆ ಲಾಟೀನು ಹೊತ್ತಿಸಿತ್ತು, ನಿಜ. ಆದರೆ ಮಸಕು ಬೆಳಕು. ಬತ್ತಿ ಸರಿಮಾಡಿ, ಗಾಜು ಒರೆಸಬೇಕಿತ್ತು ಅಷ್ಟೆ. ಆಗ ನಿರ್ಧಾರ ಮಾಡಿದೆ, ಹೋಗಲೇಬೇಕು ಅಂತ. ಅಪ್ಪ, ಅಮ್ಮಂಗೂ ಹೇಳಿದೆ. ಅವರಿಗೆ ಸ್ವಲ್ಪವೂ ಇಷ್ಟ ಇಲ್ಲ. ಆದ್ರೆ ನಾನು ಒಂಥರಾ ಹಟಮಾರಿ ಅಂತ ಗೊತ್ತಲ್ಲ ಅವರಿಗೆ... ಹಿಂಗಾಗಿ ಸುಮ್ಮನಾದ್ರು. ಅಡ್ಮಿಶನ್ ಎಲ್ಲ ಮುಗಿದ ದಿನ ನಿಮಗೆ ಹೇಳಣ ಅಂತ ಸುಮ್ಮನಿದ್ದೆ.'

'ರಂಗಶಂಕರದಲ್ಲಿ ನಿಮ್ಮ ರಾಜೋ ಸಿಕ್ಕಿದ್ದಳಪ್ಪ, ಸಾಬುದಾನಿ ವಡೆ ತಿಂದು ಕಾಫಿ ಕುಡಿದ್ವಿ. ರಂಗದ ಬಗ್ಗೆ ಒಳ್ಳೆ ತಿಳಿವಳಿಕೆ ಇದೆ' ಅಂದಿದ್ದನೇ ಹೊರತು ಏನೇನು ಮಾತಾಡಿದೆವು ಅಂತ ಅವನೂ ಹೇಳಿರಲಿಲ್ಲ. ನಾಟಕದ ವಿಷಯ ಏನೋ ಚರ್ಚೆ ಮಾಡಿರ್ತಾರೆ ಎಂದುಕೊಂಡು ವಿನುತಾಳೂ ಕೆದಕಲು ಹೋಗಿರಲಿಲ್ಲ. ರಾಜೋ ಕೂಡ 'ನಿನ್ನ ಹಬ್ಬಿ ಸಿಕ್ಕಿದ್ದರು ಕಣೇ' ಎಂದಿದ್ದಳೆ ಹೊರತು ಏನು ಮಾತಾಡಿದೆವು ಎಂಬುದನ್ನು ಹೇಳಿರಲಿಲ್ಲ. ಈಗ ನೋಡಿದರೆ ಇಬ್ಬರೂ ಇಷ್ಟು ಆಪ್ತವಾಗಿ ಮಾತಾಡಿಕೊಂಡಿದ್ದಾರಲ್ಲ ಎಂಬುದು ವಿನುತಾಳ ಮನದ ಮೂಲೆಯಲ್ಲಿ ಕರೆಕರೆ ಮಾಡತೊಡಗಿತು.

'ರಮೇಶಸರ್ ಜೊತೆಗೆ ನಾಟಕದ ವಿಷಯಗಳನ್ನಷ್ಟೇ ಚರ್ಚೆ ಮಾಡ್ತಾ ಇದ್ದೆ. ಎದುರಿನವರು ಏನಾದ್ರೂ ಹೇಳ್ತಿದ್ದರೆ, ಅದನ್ನು ಪೂರ್ಣ ಗಮನವಿಟ್ಟು ಕೇಳಿ, ಆಮೇಲೆ ನಿಧಾನಕ್ಕೆ ತಮ್ಮ ವಿಷಯ ಮಂಡನೆ ಮಾಡ್ತಾರಲ್ಲ ಅವರು ವಿನೀ, ಅದು ನನಗೆ ಬಹಳ ಇಷ್ಟವಾಯಿತು. ಅಪರೂಪಕ್ಕೆ ಹಿಂಗೆ ಕೆಲವರ ಜೊತೆ ಮಾತ್ರ ನಮಗೆ ಈ ಥರಾ ಮಾತಾಡಕ್ಕೆ ಆಗುತ್ತೆ. ಅಂದ್ರೆ ಹೆಣ್ಣು, ಗಂಡು, ವೃತ್ತಿ, ವಯಸ್ಸು ಈ ಥರಾ ಯಾವುದರ ಹಂಗಿಲ್ಲದೇ ಅಲ್ಲವಾ' ರಾಜೋ ಹೇಳಿದಳು. ಅರೆ, ಗಂಡ ಹಾಗೆ ಭಾರೀ ಇಂಟಲೆಕ್ಚುವಲ್ ಥರಾ ವಾದಮಂಡನೆ ಮಾಡೋದನ್ನು ತಾನು ನೋಡಿಯೇ ಇಲ್ಲವಲ್ಲ ಎನ್ನಿಸಿ, ಅದನ್ನು ಕಲ್ಪಿಸಿಕೊಳ್ಳಲು ಯತ್ನಿಸುತ್ತ, ಕರೆಕರೆ ಹಿಂದೆ ಸರಿದು, ವಿನುತಾಳಿಗೆ ನಗು ಬಂತು.

ಮೇಗಲೆ ಒಳಗೆ ಹೋಗಿ ಇನ್ನೊಂದು ಬಾಟಲಿ ವೈನ್ ತೆಗೆದುಕೊಂಡು ಬಂದಳು.